ಅ.ದಾ. ಸಂಃ 327/2024 ಡಿ.ಡಬ್ಲ್ಯು: 01

ದಿನಾಂಕಃ 11-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಬಿ.ಎಲ್ ವಾದಿ ಪರ ವಕೀಲರಿಂದಃ

ನಿಡಿ-18 ಮತ್ತು 19 ರ ದಾಖಲೆಗಳು ಸರ್ವೆ ನಂ. 45/11 ಕ್ಕೆ ಸಂಬಂಧಪಟ್ಟ ದಾಖಲೆಗಳಾಗಿರುತ್ತವೆ. ಸರ್ವೆ ನಂ. 45/11 ರ ಜಮೀನಿಗೂ ಈ ದಾವೆಯ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-18 ಮತ್ತು 19 ರ ದಾಖಲೆಗಳನ್ನು ನಾನು ಅರ್ಜಿಯ ಮೂಲಕ ತಯಾರು ಮಾಡಿಸಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಮತ್ತು ನನ್ನ ಮಧ್ಯೆ ಮಾತ್ರ ವಿವಾದವಿರುತ್ತದೆ ಎಂದರೆ ಸರಿ. ನಿಡಿ-18 ಮತ್ತು 19 ರ ದಾಖಲೆಗಳು ಈ ದಾವೆಯ ವಾದಿ ಮತ್ತು ನನಗೆ ಯಾವುದೇ ರೀತಿಯಲ್ಲಿ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-18 ಮತ್ತು 19 ರ ದಾಖಲೆಗಳು ನನಗೆ ಸಂಬಂಧಪಟ್ಟ ದಾಖಲೆಗಳಾಗಿರುವುದಿಲ್ಲ ಎಂದರೆ ಸಾಕ್ಷಿ ಸರ್ವೆ ನಂ. 45/19 ರ ದಾಖಲೆಯು ಶಿವಮ್ಮರವರಿಗೆ ಸಂಬಂಧಪಟ್ಟ ದಾಖಲೆಯಾಗಿದ್ದು ಸರ್ವೆ ನಂ. 45/17 ರ ದಾಖಲೆಯು ನನಗೆ ಸಂಬಂಧಪಟ್ಟಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 45/19 ರ 3 ಗುಂಟೆಗೆ ಹೋಗುವ ದಾರಿಯೇ ನಿಡಿ-19 ರ ದಾಖಲೆಯಲ್ಲಿ ನಮೂದಿಸಿರುವ ದಾರಿಯಾಗಿರುತ್ತದೆ ಎಂದರೆ ಸರಿ.

ನಿಡಿ-2 ರ ವಿಭಾಗ ಪತ್ರದ ಎ ಷೆಡ್ಯೂಲ್ ನಲ್ಲಿ ನಮೂದಿಸಿರುವ ಚೆಕ್ಕುಬಂದಿಯ ಪೈಕಿ ದಕ್ಷಿಣಕ್ಕೆ ಇದೆ ಎಂದು ತೋರಿಸಿರುವ ಬ್ಲಾಕ್ ನಂ.2 ರ ಆಸ್ತಿಯು ಸುಜಾತರವರಿಗೆ ಸೇರಿದ 3 ಗುಂಟೆಯ ಆಸ್ತಿ ಎಂದರೆ ಸರಿ. ಸದರಿ ಬ್ಲಾಕ್ ನಂ.2 ಎಂದರೆ ನಿಡಿ-19 ರಲ್ಲಿ ಸಂಖ್ಯೆ 19 ಎಂದು ನಮೂದಿಸಿರುವ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿ ನಿಡಿ-19 ರಲ್ಲಿ ತೋರಿಸಿರುವ ದಾರಿಯೂ ಸಹ ಸುಜಾತರವರಿಗೆ ಸೇರಿದ 3 ಗುಂಟೆಗೆ ಸೇರುತ್ತದೆ ಎಂದು ನುಡಿಯುತ್ತಾರೆ. ನಿಡಿ-6 ರಲ್ಲಿ ತೋರಿಸಿರುವ ದಾರಿಯನ್ನು ಹೊರತುಪಡಿಸಿ ಉಳಿದ ಆಸ್ತಿಯನ್ನು ನಾನು ಮತ್ತು ಸುಜಾತರವರು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾರಿಯು ಸುಜಾತರವರಿಗೆ ಸೇರಿದ 3 ಗುಂಟೆಗೆ ಒಳಪಡುತ್ತದೆ ಎಂದು ನುಡಿಯುತ್ತಾರೆ. ಸದರಿ ದಾರಿಯನ್ನು ಸೇರಿಸಿ 3 ಗುಂಟೆ ಸುಜಾತರವರಿಗೆ ಸೇರಿದ್ದು ಎಂದು ನಿಡಿ-2 ರಲ್ಲಿ ನಮೂದಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾರಿಯಲ್ಲಿ ಸುಜಾತರವರಿಗೆ ಹಕ್ಕು ಇದ್ದು ಅದರಲ್ಲಿ ನನಗೆ ಹಕ್ಕು ಇರುವುದಿಲ್ಲವೆಂದು ನಿಡಿ-2 ರಲ್ಲಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ದಾರಿಯಲ್ಲಿ ನನಗೆ ಮತ್ತು ಸುಜಾತರವರಿಗೆ ಇಬ್ಬರಿಗೂ ಹಕ್ಕು ಇದೆ ಎಂದು ವಿಭಾಗ ಮಾಡಿಕೊಂಡೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ

ದಾರಿಯು ಅವರಿಗೆ ಬೇಕೆಂದು ಕೇಳಿದ ಕಾರಣ ಅವರಿಗೆ ಸೇರಿದ 3 ಗುಂಟೆಗೆ ಸದರಿ ದಾರಿಯು ಒಳಪಡುತ್ತದೆ ಎಂದು ನುಡಿಯುತ್ತಾರೆ. ನಿಡಿ-2 ರ ಪ್ರಕಾರ ಸದರಿ ದಾರಿಯು ನನಗೆ ಸೇರಿದ 2 1/2 ಗುಂಟೆ ಆಸ್ತಿಗೆ ಒಳಪಡುತ್ತದೆ ಎಂದರೆ ಸರಿಯಲ್ಲ. ಸದರಿ ದಾರಿಯನ್ನು ಹೊರತುಪಡಿಸಿದರೆ ನನಗೆ ಬಂದ ಆಸ್ತಿಯ ವಿಸ್ತೀರ್ಣ 2 1/2 ಗುಂಟೆ ಇರುವುದಿಲ್ಲವಾದ ಕಾರಣ ನಿಡಿ-2 ರ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-6 ರಲ್ಲಿ ಕಾಣಿಸುವ ದಾರಿಗೆ ಹೊಂದಿಕೊಂಡಂತೆ ನಾನು ನೀರಿನ ತೊಟ್ಟಿಯನ್ನು ನಿರ್ಮಿಸಿದ್ದೇನೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ನೋಟೀಸ್ ಅನ್ನು ತೋರಿಸಿ ಸದರಿ ನೋಟೀಸ್ ತಾನು ನೀಡಿದ ಅರ್ಜಿಗೆ ಸಂಬಂಧಪಟ್ಟ ನೋಟೀಸ್ ಎಂದು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ನೋಟೀಸ್ ಅನ್ನು ನಿಪಿ-13 ಎಂದು ಗುರುತಿಸಲಾಯಿತು. ನಿಪಿ-13 ರ ನೋಟೀಸ್ ಅನ್ನು ನೀಡಿದ ನಂತರ ಸಂಬಂಧಪಟ್ಟ ಇಲಾಖೆಯವರು ಬಂದು ಅಳತೆ ಕಾರ್ಯವನ್ನು ಮಾಡಿರುತ್ತಾರೆ. ನಿಪಿ-13 ರ ನೋಟೀಸಿನ ನಂತರ ಕೈಗೊಂಡರು ಎಂದು ಹೇಳುವ ಅಳತೆ ಕಾರ್ಯಕ್ಕೆ ಸಂಬಂಧಪಟ್ಟ ವರದಿಯನ್ನು ನಿಮಗೆ ನೀಡಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಿಡಿ-18 ಮತ್ತು 19 ರ ದಾಖಲೆಗಳೇ ಸದರಿ ಅಳತೆ ಕಾರ್ಯದ ವರದಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 45/17 ರ ಆಸ್ತಿಗೆ ಸಂಬಂಧಪಟ್ಟ ಸ್ಕೆಚ್ ಅನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು